## ಕರ್ನಾಟಕ ಸರ್ಕಾರದ ನಡೆವಳಿಗಳು

**ವಿಷಯ:** 2016–17ನೇ ಸಾಲಿನಿಂದ ವಿತ್ತೀಯ ಕಾರ್ಯನೀತಿ ಸಂಸ್ಥೆ, ಬೆಂಗಳೂರು ಇಲ್ಲಿ ಅಲ್ಪಾವಧಿ ಸಮಾಲೋಚಕರನ್ನು ನೇಮಿಸುವ ಬಗ್ಗೆ.

**ಓದಲಾಗಿದೆ:** ನಿರ್ದೇಶಕರು, ವಿತ್ತೀಯ ಕಾರ್ಯನೀತಿ ಸಂಸ್ಥೆ, ಬೆಂಗಳೂರು, ಇವರ ಪತ್ರ ಸಂಖ್ಯೆ FPI/3/Adm 2015-16, ದಿನಾಂಕ:08.06.2016.

**ಪ್ರಸ್ತಾವನೆ :**

ನಿರ್ದೇಶಕರು, ವಿತ್ತೀಯ ಕಾರ್ಯನೀತಿ ಸಂಸ್ಥೆ, ಬೆಂಗಳೂರು, ಇವರ ಮೇಲೆ ಓದಲಾದ ದಿನಾಂಕ:08.06.2016ರ ಪತ್ರದಲ್ಲಿ ವಿತ್ತೀಯ ಕಾರ್ಯನೀತಿ ಸಂಸ್ಥೆಯು ರಾಜ್ಯಮಟ್ಟದ ತರಬೇತಿ ಸಂಸ್ಥೆಯಾಗಿದ್ದು, ತನ್ನ ಸಂಶೋಧನಾ ಕಾರ್ಯಚಟುವಟಿಕೆಗಳಿಗಾಗಿ ವಿವಿಧ ವಿದ್ಯಾರ್ಹತೆ ಹಾಗೂ ಅನುಭವ ಉಳ್ಳಂತಹ Research Associate, Research Fellow, Field Investigator ಮತ್ತು Data Entry Operator ಗಳನ್ನು ಅಲ್ಪಾವಧಿ ಸಮಾಲೋಚಕರುಗಳನ್ನಾಗಿ ನೇಮಿಸಿಕೊಳ್ಳುವ ಅವಶ್ಯಕತೆಯಿದೆ ಎಂದು ಹಾಗೂ ಇದರಿಂದಾಗಿ ಸಾಮರ್ಥ್ಯ ವೃದ್ಧಿಗೆ ಸಹಕಾರಿಯಾಗಲಿದೆ ಎಂದು ತಿಳಿಸಿದ್ದಾರೆ. ದಿನಾಂಕ 10ನೇ ಸೆಪ್ಟೆಂಬರ್ 2015ರಂದು ನಡೆದ 11ನೇ ಗೌರ್ನಿಂಗ್ ಕೌನ್ಸಿಲ್ ಸಭೆಯಲ್ಲಿ ಅಲ್ಪಾವಧಿ ಸಮಾಲೋಚಕರನ್ನು ನೇಮಕಾತಿ ಮಾಡುವ ವಿಷಯಕ್ಕೆ ಸಂಬಂಧಿಸಿದಂತೆ ಚರ್ಚಿಸಲಾಗಿ, ಅಲ್ಪಾವಧಿ ಸಮಾಲೋಚಕರನ್ನು ಹಾಗೂ ನುರಿತ ಸಮಾಲೋಚಕರನ್ನು ಅಲ್ಪಾವಧಿ ಸಮಾಲೋಚನಾ ನೀತಿ ಮತ್ತು ಮಾರ್ಗಸೂಚಿಯನ್ವಯ ನೇಮಕ ಮಾಡುವಂತೆ ತೀರ್ಮಾನಿಸಿದ ಹಿನ್ನೆಲೆಯಲ್ಲಿ ಅಲ್ಪಾವಧಿ ಸಮಾಲೋಚಕರನ್ನು ನೇಮಿಸಲು ಸರ್ಕಾರದ ಅನುಮತಿ ಕೋರಿರುತ್ತಾರೆ. ಸದರಿ ಪ್ರಸ್ತಾವನೆಯನ್ನು ಪರಿಶೀಲಿಸಿದ ಸರ್ಕಾರವು ಮುಂದಿನಂತೆ ಆದೇಶಿಸುತ್ತದೆ.

**ಸರ್ಕಾರಿ ಆದೇಶ ಸಂಖ್ಯೆ: ಆಇ 15 ಸಾವಿಯೋ 2016, ಬೆಂಗಳೂರು, ದಿನಾಂಕ:20.08.2016**

ಪ್ರಸ್ತಾವನೆಯಲ್ಲಿ ವಿವರಿಸಲಾದ ಅಂಶಗಳ ಹಿನ್ನೆಲೆಯಲ್ಲಿ, ವಿತ್ತೀಯ ಕಾರ್ಯನೀತಿ ಸಂಸ್ಥೆಯಲ್ಲಿ ಸಂಶೋಧನಾ ಕಾರ್ಯಚಟುವಟಿಕೆಗಳಿಗಾಗಿ ವಿವಿಧ ವಿದ್ಯಾರ್ಹತೆ ಹಾಗೂ ಅನುಭವ ಉಳ್ಳಂತಹ Research Associate, Research Fellow, Field Investigator ಮತ್ತು Data Entry Operator ಗಳನ್ನು ಅಲ್ಪಾವಧಿ ಸಮಾಲೋಚಕರುಗಳನ್ನಾಗಿ ನೇಮಿಸಿಕೊಳ್ಳಲು ಸರ್ಕಾರದ ಅನುಮತಿ ನೀಡಲಾಗಿದೆ.

ಅಲ್ಪಾವಧಿ ಸಮಾಲೋಚಕರುಗಳ ಆಯ್ಕೆ ವಿಧಾನದ ಷರತ್ತು ಮತ್ತು ನಿಬಂಧನೆಗಳು ಹಾಗೂ ಅಲ್ಪಾವಧಿ ಸಮಾಲೋಚನಾ ನೀತಿ ಮತ್ತು ಮಾರ್ಗಸೂಚಿಯನ್ನು ಈ ಆದೇಶಕ್ಕೆ ಲಗತ್ತಿಸಿರುವ ಅನುಬಂಧ–1, ಅನುಬಂಧ–2, **II A, II B,** ಮತ್ತು **III** ರಂತೆ ಇರುತ್ತದೆ.

ಈ ವೆಚ್ಚವನ್ನು 'ಲೆಕ್ಕ ಶೀರ್ಷಿಕೆ 2052–00–090–0–12–015 ಪೂರಕ ವೆಚ್ಚಗಳು' ಅಡಿಯಲ್ಲಿ ಭರಿಸತಕ್ಕದ್ದು.

ಈ ಆದೇಶವನ್ನು ಸರ್ಕಾರಿ ಆದೇಶ ಸಂಖ್ಯೆ:ಆಇ 2 ಟಿಎಫ್‌ಪಿ 2016, ದಿನಾಂಕ:20.01.2016ರನ್ವಯ ಇಲಾಖಾ ಮುಖ್ಯಸ್ಥರಿಗೆ ಪ್ರತ್ಯಾಯೋಜಿಸಲಾದ ಆರ್ಥಿಕ ಅಧಿಕಾರದನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು
ಅವರ ಹೆಸರಿನಲ್ಲಿ,

(ಜಿ. ಶಶಿಧರ್)
ಸರ್ಕಾರದ ಅಧೀನ ಕಾರ್ಯದರ್ಶಿ
ಆರ್ಥಿಕ ಇಲಾಖೆ (ಆಡಳಿತ ಮತ್ತು ಮುಂಗಡಗಳು)

680
ದಿನಾಂಕ : 01/9/16
ಬೆಂಗಳೂರು-560 060.

**ಪ್ರತಿ:**

1) ಪ್ರಧಾನ ಮಹಾಲೇಖಪಾಲರು (ಎ & ಇ), ಕರ್ನಾಟಕ ವೃತ್ತ, ಬೆಂಗಳೂರು.
2) ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ, ವಿಧಾನಸೌಧ, ಬೆಂಗಳೂರು.

...2

3) ಸರ್ಕಾರದ ಕಾರ್ಯದರ್ಶಿಗಳು (ಆ&ಸಂ), ಆರ್ಥಿಕ ಇಲಾಖೆ, ವಿಧಾನಸೌಧ, ಬೆಂಗಳೂರು.
4) ನಿರ್ದೇಶಕರು, ವಿತ್ತೀಯ ಕಾರ್ಯನೀತಿ ಸಂಸ್ಥೆ, ಬೆಂಗಳೂರು-ಮೈಸೂರು ರಸ್ತೆ, ಕೆಂಗೇರಿ, ಬೆಂಗಳೂರು-60,
5) ಸರ್ಕಾರದ ಉಪ ಕಾರ್ಯದರ್ಶಿಗಳು (ಆ&ಸಂ), ಆರ್ಥಿಕ ಇಲಾಖೆ, ವಿಧಾನಸೌಧ, ಬೆಂಗಳೂರು.
6) ನಿರ್ದೇಶಕರು, ಖಜಾನೆ ಇಲಾಖೆ, ವಿ.ವಿ.ಗೋಪುರ, ಬೆಂಗಳೂರು.
7) ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿ.